NP – 608

VISHWA CHETHANA DEGREE COLLEGE ★ Anekal - 562106 ★

IV Semester B.Com. Examination, June/July 2025
(NEP Scheme) (F+R)
ಕನ್ನಡ ಭಾಷಾ ಪತ್ರಿಕೆ – 4
ವಾಣಿಜ್ಯ ಕನ್ನಡ – 4

Time : 2½ Hours Max. Marks : 60

I. **ಎರಡು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**200** ಪದಗಳಿಗೆ ಮೀರದಂತೆ). **(2×10=20)**

1) ದೈತ್ಯರಾಕ್ಷಸನಿಂದ ತಪ್ಪಿಸಿಕೊಂಡ ಯೂಲಿಸಿಸ್‌ನ ಧೈರ್ಯ ಮತ್ತು ಚಾತುರ್ಯವನ್ನು ಕುರಿತು ಬರೆಯಿರಿ.

2) 'ಜಾತಿಗಿಂತ ನೀತಿ ಮುಖ್ಯ' – ಈ ಮಾತನ್ನು 'ಭಜನೆ ಬುಡೇನ್‌ಸಾಬಿ' ಪಠ್ಯದ ಹಿನ್ನೆಲೆಯಲ್ಲಿ ನಿರೂಪಿಸಿ.

3) 'ಮುತ್ತೈದಿ ಸಾವು' ಕವಿತೆಯು ಪ್ರತಿಪಾದಿಸುವ ಗಂಡು-ಹೆಣ್ಣಿನ ಸಂಬಂಧದ ಸ್ವರೂಪವನ್ನು ವಿಶ್ಲೇಷಿಸಿ.

II. **ನಾಲ್ಕು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**100** ಪದಗಳಿಗೆ ಮೀರದಂತೆ). **(4×5=20)**

1) ಕಡಲನ್ನು ನಂಬಿದವರ ಮಧ್ಯೆ ಇರುವ ಸಾಮರಸ್ಯ.

2) ಮಗ ಕರ್ಣನನ್ನು ಬಲಿಪಶು ಮಾಡಲು ಹೊರಟ ಕುಂತಿಯ ಸ್ಥಿತಿ.

3) ಕ್ಯಾನ್ಸರ್ ರೋಗಿಯ ಬಗ್ಗೆ ಜನರ ಇನ್ಸೆನ್ಸಿಟಿವ್ ವರ್ತನೆ.

4) ಬಂಡವಾಳಶಾಹಿಯ ಜಾಣಕುರುಡು ಎಂಥದ್ದು ?

5) ಕರ್ನಾಟಕ ಆಡಳಿತಾತ್ಮಕ ಸೇವಾ ಪರೀಕ್ಷೆಯನ್ನು ಕುರಿತು ಬರೆಯಿರಿ.

6) ರುರು ಮತ್ತು ಪ್ರಮುದವತಿಯರ ಕಥನವನ್ನು ಬರೆಯಿರಿ.

III. ಕೆಳಕಂಡ ಕಂಡಿಕೆಯನ್ನು **ಇಂಗ್ಲೀಷಿಗೆ** ಭಾಷಾಂತರಿಸಿ. **(1×4=4)**

ಸರಿಸುಮಾರಾದ ಒಂದು ಅಂಗಡಿಯಿಂದ 'ಸ್ವಾಮಿ ನಮಸ್ಕಾರ' ಎಂದು ಕೂಗಿದ ಹಾಗಾಯ್ತು. ನೋಡಿದರೆ ಬುಡೇನ್‌ಸಾಬಿ. 'ಏನ್ ಬುಡೇನ್‌ಸಾಬಿ ಇಲ್ಲಿದ್ದೀಯಾ ?' ಎಂದು ಕೇಳಿದ್ದಕ್ಕೆ – 'ಇದು ನಮ್ಮ ಅಂಗಡಿ ಬನ್ನಿ ಸ್ವಾಮಿ' ಎಂದು ಒಳಗೆ ಕರೆದುಕೊಂಡು ಹೋದ. ಆ ಪ್ರದೇಶಕ್ಕೆ ಅದು ದೊಡ್ಡ ಅಂಗಡಿಯೇ, ದೊಡ್ಡ ದೊಡ್ಡ ಡಬ್ಬಗಳಲ್ಲಿ ಅಕ್ಕಿ, ಬೇಳೆ ಮುಂತಾದವುಗಳನ್ನೆಲ್ಲ ತುಂಬಿಸಿ ಇಟ್ಟಿದ್ದ. 'ಏನಿದು ದೊಡ್ಡ ಅಂಗಡಿ ಮಾಡಿದಂಗಿದೆ' ಎಂದದ್ದಕ್ಕೆ – 'ಹ್ಞೂ ಸ್ವಾಮಿ ಸ್ವಲ್ಪ ದೊಡ್ಡದು ಮಾಡಿದೀನಿ. ಒಳಕ್ಕೆ ಬನ್ನಿ' ಎಂದು ಮೆಟ್ಟಿಲು ಹತ್ತಿ ಮಹಡಿ ಮನೆಗೆ ಕರೆದುಕೊಂಡು ಹೋದ.

IV. **ಒಂದು** ಕಾಲ್ಪನಿಕ ಹೆಸರಿನಲ್ಲಿ ಕಂಪನಿಯೊಂದರ ಮ್ಯಾನೇಜರ್ ಹುದ್ದೆಗೆ ಅಭ್ಯರ್ಥನ ಪತ್ರ ಬರೆಯಿರಿ. **(1×4=4)**

V. ಕೆಳಕಂಡ ಚಿತ್ರ/ಸನ್ನಿವೇಶ ಗಮನಿಸಿ **ಒಂದು** ಕತೆ ಅಥವಾ ಕವಿತೆ ಬರೆಯಿರಿ. **(1×4=4)**

'ಟ್ರಾಫಿಕ್ ಸಿಗ್ನಲ್‌ನಲ್ಲಿ ಹೂ ಮಾರುತ್ತಿರುವ ಹುಡುಗ'.

VI. ಕೆಳಕಂಡ ಗದ್ಯ ಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ. **(1×4=4)**

ಒಮ್ಮೆ ಅತಿವೇಗದಲ್ಲಿ ಗಾಡಿ ಓಡಿಸುತ್ತಿದ್ದ ಕಾರಣಕ್ಕೆ ಪೊಲೀಸ್ ರಾಂಡಿಪಾಶ್‌ನನ್ನು ತಡೆದು ನಿಲ್ಲಿಸುತ್ತಾರೆ. ಸರಿ, ಲೈಸೆನ್ಸ್ ಮತ್ತು ಡಾಕ್ಯುಮೆಂಟಿನ ತಪಾಸಣೆ ಶುರುವಾಗುತ್ತದೆ. ಪೆನ್ಸಿಲ್ವೇನಿಯಾದ ರಿಜಿಸ್ಟ್ರೇಷನ್ ಮತ್ತು ಲೈಸೆನ್ಸ್ ನೋಡಿದ ಪೊಲೀಸ್ ಆಫೀಸರ್ ಪಿಟ್ಸ್‌ಬರ್ಗ್‌ನ ರಿಜಿಸ್ಟ್ರೇಷನ್ ಯಾಕೆ ಮಾಡಿಸಿಲ್ಲ ಎಂದು ಪ್ರಶ್ನಿಸುತ್ತಾರೆ. ಆಗ ರಾಂಡಿ 'ನಾನು ಇನ್ನು ಕೆಲವೇ ತಿಂಗಳುಗಳಲ್ಲಿ ಸಾಯಲಿರುವ ಟರ್ಮಿನಲ್ ಕ್ಯಾನ್ಸರ್ ಪೇಷೆಂಟ್. ಆ ಕಾರಣಕ್ಕೆ ಬಂಧುಗಳ ಹತ್ತಿರವಿರೋಣವೆಂದು ತರಾತುರಿಯಲ್ಲಿ ಶಿಫ್ಟ್ ಮಾಡಿದೆ, ಹಾಗಾಗಿ ಬಿಡುವಾಗಿಲ್ಲ' ಎನ್ನುತ್ತಾರೆ. ಪೊಲೀಸ್ ಅಧಿಕಾರಿ 'ಅರೆ ! ನಿಮ್ಮನ್ನು ನೋಡಿದರೆ ಹಾಗೆ ಕಾಣಿಸುವುದಿಲ್ಲವಲ್ಲ' ಎನ್ನುತ್ತಾರೆ ಆಶ್ಚರ್ಯ ಮತ್ತು ಅನುಮಾನ ಎರಡೂ ಬೆರೆತ ದನಿಯಲ್ಲಿ. ಆಗ ರಾಂಡಿ ಶರ್ಟ್ ಕಳಚಿ ಕ್ಯಾನ್ಸರ್‌ನಿಂದಾದ ಎಲ್ಲ ಗಾಯಗಳನ್ನೂ ತೋರಿಸುತ್ತಾ ಹೋಗುತ್ತಾರೆ. ಪೊಲೀಸ್ ಅಧಿಕಾರಿ ಸ್ತಬ್ಧನಾಗಿ ಸ್ವಲ್ಪ ಹೊತ್ತು ನಿಂತವರು, 'ಇನ್ನು ಮುಂದೆ ಅತಿವೇಗದಲ್ಲಿ ಡ್ರೈವ್ ಮಾಡಬೇಡಿ' ಎಂದು ವಿಚಾರಣೆ ಮುಗಿಸಿಬಿಡುತ್ತಾರೆ.

VII. ಇವುಗಳಿಗೆ **ಒಂದೊಂದು** ಸರಿ ಉತ್ತರವನ್ನು ಗುರ್ತಿಸಿ ಬರೆಯಿರಿ. (**ನಾಲ್ಕು** ಪ್ರಶ್ನೆಗಳಿಗೂ ಉತ್ತರಿಸಿ). **(4×1=4)**

1) ಇವರಲ್ಲಿ ಕರ್ಣನ ಜನ್ಮರಹಸ್ಯ ಯಾರಿಗೆ ತಿಳಿದಿರಲಿಲ್ಲ ?

ಎ) ಕೃಷ್ಣ ಬಿ) ಸಹದೇವ ಸಿ) ಕುಂತಿ ಡಿ) ಅರ್ಜುನ

2) 'ಸಾಸಿವೆ ತಂದವಳು' ಕೃತಿಯ ಲೇಖಕಿ

ಎ) ಎಚ್. ನಾಗವೇಣಿ ಬಿ) ಸಂಧ್ಯಾ ಹೆಗಡೆ

ಸಿ) ಬಿ. ವಿ. ಭಾರತಿ ಡಿ) ನೇಮಿಚಂದ್ರ

3) ಬುಡೇನ್‌ಸಾಬಿ ಭೀಷ್ಮನ ಪಾತ್ರ ಮಾಡುತ್ತಿದ್ದ ನಾಟಕ

ಎ) ಮಹಾಭಾರತ ಬಿ) ಪಾಶುಪತಾಸ್ತ್ರ

ಸಿ) ಭೀಷ್ಮ ಪ್ರತಿಜ್ಞೆ ಡಿ) ಕುರುಕ್ಷೇತ್ರ

4) ಭಾರತದಲ್ಲಿ ಕೇಂದ್ರ ಲೋಕಸೇವಾ ಆಯೋಗ ಸ್ಥಾಪನೆಯಾದ ವರ್ಷ

ಎ) 1949 ಬಿ) 1950 ಸಿ) 1951 ಡಿ) 1952

---